OS: 199/2021
PW: 2

ಸಾಕ್ಷಿಯನ್ನು ದಿಃ 19-07-2023 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ ಸಿ ಎಸ್ ವಕೀಲರಿಂದಃ**

1. ನನ್ನ ಮನೆಯು ರಾಜೀವಗಾಂಧಿನಗರ ಶಿಕ್ಷಕರ ಬಡಾವಣೆ ಗದಗ ನಲ್ಲಿದೆ. ವಾದಿಯು ಮೊದಲು ಒಕ್ಕಲುಗೇರಿ ಓಣಿಯಲ್ಲಿದ್ದು ಈಗ ರಾಜೀವಗಾಂಧಿನಗರ ಶಿಕ್ಷಕರ ಬಡಾವಣೆ ಗದಗನಲ್ಲಿರುತ್ತಾರೆ. ವಾದಿ ನನಗೆ ತುಂಬಾ ಬೇಕಾದವನು ಎಂದರೆ ಸರಿ. ಒಳ್ಳೆಯ ಬಾಂಧವ್ಯವಿದೆ. ವಾದಿ, ಅವರ ತಂದೆ, ಅವರ ಮನೆತನದ ದೈನಂದಿನ ವಿಚಾರಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇರುತ್ತದೆ. ಸಾಕ್ಷಿಯು ಮುಂದುವರೆದು ದೈನಂದಿನ ವಿಚಾರಗಳ ಬಗ್ಗೆ ಹೇಳಲು ಬರುವುದಿಲ್ಲ. ವಾದಿಯು ಹೇಳಿದ ಪ್ರಕಾರ ಅವರ ಮನೆತನದ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿಯರ ಕುಟುಂಬಕ್ಕೆ ಎಷ್ಟು ಆಸ್ತಿಗಳು, ಕ್ಷೇತ್ರ, ಸರ್ವೇ ನಂಬರು ಹೇಳಲು ಬರುವುದಿಲ್ಲ. ವಾದಿ, ಪ್ರತಿವಾದಿಯರ, ಅವರ ತಂದೆಯ ನಡುವೆ ಪಾಲು ವಾಟ್ನಿ ಆಗಿಲ್ಲ. ನನಗೆ ವೈಯಕ್ತಿಕವಾಗಿ ಮಾಹಿತಿ ಇರುತ್ತದೆ. ನಾನು ಒಕ್ಕಲುಗೇರಿ ಓಣಿಯಿಂದ ರಾಜೀವಗಾಂಧಿನಗರ ಶಿಕ್ಷಕರ ಬಡಾವಣೆಗೆ ಹೋಗಿ 2-3 ವರ್ಷಗಳಾಗಿವೆ. ವಾದಿಯ ಸಹೋದರರು, ಅವರ ತಂದೆಯ ನಡುವೆ ತಮ್ಮ ಕುಟುಂಬದ ಆಸ್ತಿಗಳ ಬಗ್ಗೆ 2021 ರಲ್ಲಿ ನೊಂದಾಯತ ಪಾಲು ವಾಟ್ನಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

2. ವಾದಿಯ ತಂದೆ ಕರಕಪ್ಪ @ ಕರಿಯಪ್ಪ ಶೇತ್ಕಿ ಮಾಡುತ್ತಾರೆ. ಕುರಿ ಸಾಕಾಣಿಕೆ ಮಾಡುತ್ತಿದ್ದರು ಈಗ ಬಿಟ್ಟಿರುತ್ತಾರೆ. ದೊಡ್ಡ ಪ್ರಮಾಣದಲ್ಲಿ ಕುರಿ ಸಾಕಾಣಿಕೆ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಮಗನಾದ 1 ನೇ ವಾದಿಯು ಮನೆತನದ ಹಿರೇತನವನ್ನು ನೋಡಿಕೊಳ್ಳುತ್ತಿದ್ದನು ಎಂದರೆ ಸರಿ. 2 ನೇ ವಾದಿಯ ಮದುವೆಯಾಗಿದ್ದರೂ ಸಹ ತವರು ಮನೆಯ ಹಿರೇತನವನ್ನು ಅವಳೇ ಮಾಡುತ್ತಿದ್ದಳು ಎಂದರೆ ಸರಿ. 1 ನೇ ವಾದಿಯದು ಸ್ವಂತ ಉದ್ಯೋಗ ಇಲ್ಲ ಎಂದರೆ ಸರಿ. 10-12 ವರ್ಷಗಳ ಹಿಂದೆ ಎಂದರೆ 2015 ರಲ್ಲಿ ಯಲ್ಲಪ್ಪನ ಹೆಂಡತಿ ಹಾಗೂ ಉಳಿದ ಹೆಣ್ಣು ಮಕ್ಕಳ ನಡುವೆ ಭಿನ್ನಾಭಿಪ್ರಾಯ ಬಂದಿದ್ದು ಮನೆ ಬೇರೆ ಮಾಡುತ್ತೇನೆ ಎಂದು 1 ನೇ ವಾದಿ

ತಿಳಿಸಿದ್ದನು ಎಂದರೆ ಸರಿ. ಮುಂದುವರೆದು ಎಲ್ಲ ವ್ಯವಹಾರ ಏಕತ್ರ ಇರುತ್ತದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ 1 ನೇ ವಾದಿಯು ನನಗೆ ಆಸ್ತಿ ಕೊಡು ಎಂದಾಗ 1 ನೇ ಪ್ರತಿವಾದಿಯು 1 ನೇ ವಾದಿಗೆ ಸರ್ವೇ ನಂ. 735/1+2 ಬಿ ನಲ್ಲಿ 2 ಎಕರೆ 1 ಗುಂಟೆ ಆಸ್ತಿಯನ್ನು ಖರೀದಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಏಕತ್ರ ಕುಟುಂಬದಿಂದ ಬಂದ ಉತ್ಪನ್ನದಿಂದ ಸರ್ವೇ ನಂ. 735/1+2 ಬಿ ಯನ್ನು 1 ನೇ ವಾದಿಯ ಹೆಸರಿನಲ್ಲಿ ಖರೀದಿಸಿರುತ್ತಾನೆ ಎಂದರೆ ಸರಿಯಲ್ಲ. 1 ನೇ ವಾದಿಯ ಹೆಂಡತಿಯ ಮನೆಯವರು 1 ನೇ ವಾದಿಗೆ ಸರ್ವೇ ನಂ. 735/1+2 ಬಿ ಖರೀದಿಸಿ ಕೊಟ್ಟಿರುತ್ತಾರೆ. ಅದೇ ಪ್ರಕಾರ ಒಂದು ಪ್ಲಾಟನ್ನು ಕೊಡಿಸಿರುತ್ತಾರೆ. 1 ನೇ ವಾದಿಯ ಮದುವೆಯಾಗಿ ಅಂದಾಜು 30-35 ವರ್ಷ ಆಗಿರಬಹುದು. 1 ನೇ ವಾದಿಯ ಹೆಂಡತಿಯ ಅಣ್ಣ-ತಮ್ಮಂದಿರು ಸರ್ವೇ ನಂ. 735/1+2 ಬಿ ಹಾಗೂ 1 ಪ್ಲಾಟನ್ನು ಕೊಟ್ಟಿರುತ್ತಾರೆ. ಎಷ್ಟು ದುಡ್ಡಿಗೆ 2 ಆಸ್ತಿಗಳನ್ನು ಖರೀದಿ ಹಿಡಿದರು ಎಂದು ಗೊತ್ತಿಲ್ಲ. ನಾನು ಸದರಿ 2 ಆಸ್ತಿಗಳ ಖರೀದಿ ವ್ಯವಹಾರದಲ್ಲಿ ಭಾಗವಹಿಸಿರುವುದಿಲ್ಲ. ಯಾರಿಂದ ಯಾವಾಗ 2 ಆಸ್ತಿಗಳು ಖರೀದಿಯಾದವು ಎನ್ನುವುದು ನನಗೆ ಗೊತ್ತಿಲ್ಲ. ಖರೀದಿಯಾಗಿರುವುದು ಅಷ್ಟೇ ಗೊತ್ತು. 1 ನೇ ವಾದಿ ಹೇಳಿದ ಪ್ರಕಾರ 1 ನೇ ವಾದಿಯ ಹೆಂಡತಿಯ ತವರು ಮನೆಯವರು 2 ಎಕರೆ 1 ಗುಂಟೆ ಹಾಗೂ ಪ್ಲಾಟನ್ನು ಖರೀದಿಸಿಕೊಟ್ಟಿರುತ್ತಾರೆ ಎಂದರೆ ನಾನು ಖರೀದಿ ಹಿಡಿದ ಉತಾರಗಳನ್ನು ನೋಡಿದಾಗ ಗೊತ್ತಾಯಿತು. 2 ನೇ ವಾದಿಗೆ 1 ನೇ ಪ್ರತಿವಾದಿಯು 1 ಪ್ಲಾಟನ್ನು ಹಿಡಿದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅವಳು ಸ್ವಂತ ಹಿಡಿದಿರುತ್ತಾಳೆ. ಸದರಿ ಖರೀದಿ ವ್ಯವಹಾರಕ್ಕೆ ನಾನು ಹೋಗಿಲ್ಲ. ನಾನು ದಾಖಲೆಗಳನ್ನು ನೋಡಿರುತ್ತೇನೆ. 1 ಹಾಗೂ 2 ನೇ ವಾದಿಯರು ನನಗೆ ದಾಖಲೆಗಳನ್ನು ತೋರಿಸಿರುತ್ತಾರೆ. ದಾಖಲೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ, ಸ್ವಂತಕ್ಕೆ ಮಾಹಿತಿ ಇಲ್ಲ ಎಂದರೆ ಸರಿ.

3. 1 ನೇ ಪ್ರತಿವಾದಿಯು ತನ್ನ ಅವಿಭಕ್ತ ಕುಟುಂಬದಿಂದ ಬಂದ ಉತ್ಪನ್ನದಿಂದ 2 ನೇ ವಾದಿಗೆ ಪ್ಲಾಟನ್ನು ಖರೀದಿಸಿ ಕೊಟ್ಟಿರುತ್ತಾರೆ ಎಂದರೆ ಸುಳ್ಳು. 2 ನೇ ವಾದಿಗೆ ತನ್ನ ಸ್ವಂತಕ್ಕೆ ಖರೀದಿಸಿರುತ್ತಾಳೆ. 2 ನೇ ವಾದಿಯು ಹೊಲ ಮನೆ ಕೆಲಸ ಮಾಡುತ್ತಾಳೆ. 1 ನೇ ಪ್ರತಿವಾದಿಯು 1 ಹಾಗೂ 2 ನೇ ವಾದಿಯರಿಗೆ ಅವಿಭಕ್ತ ಕುಟುಂಬದಿಂದ ಬಂದ ಉತ್ಪನ್ನದಿಂದ ಆಸ್ತಿಗಳನ್ನು ಖರೀದಿಸಿಕೊಟ್ಟಿರುವುದರಿಂದ 1 ಹಾಗೂ 2 ನೇ ವಾದಿಯರು

ತಮಗೆ ಪಾಲು ಬೇಡ ಎಂದು ಹೇಳಿದರು ಎಂದರೆ ಸುಳ್ಳು. ಹೆಚ್ಚಿನ ಆಸೆಗೆ ಬಿದ್ದು, ಪ್ರತಿವಾದಿಯರಿಗೆ ತೊಂದರೆ ಕೊಡಬೆಕೆಂದು ಅವಿಭಕ್ತ ಕುಟುಂಬದಲ್ಲಿಯೂ ಸಹ ಪಾಲು ಸಿಗಬೇಕು ಎಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸುಳ್ಳು. ನನಗೆ ಗಿಡ್ಡಹನಮಣ್ಣನವರ ಮನೆತನದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ 1 ನೇ ವಾದಿಯ ಮಾತನ್ನು ಕೇಳಿಕೊಂಡು ಅವರಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.